# ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:ವಿವಾದ: 70:2015-16 ದಿ: ೨೨ -04-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1. ಗಂಗಮ್ಮ ಗಂಡ: ರಾಮುಡು
ಕಮೇಲ ಹತ್ತಿರ ಬಳ್ಳಾರಿ
2. ಬಜ್ಜಣ್ಣ ತಂದೆ: ಗೆಜ್ಜೆಳ್ಳಿ ಹನುಮಂತಪ್ಪ
ಸಿದ್ದರಾಂಪುರ ಗ್ರಾಮ ಸಿರುಗುಪ್ಪ ತಾಲೂಕು

**ಪ್ರತಿವಾದಿಗಳು**

ಗೋವಿಂದಪ್ಪ ತಂದೆ: ಕೂರಿಗನೂರು ರಾಮನಾಯ್ಕ
ಭೈರಾಪುರ ಗ್ರಾಮ, ಸಿರುಗುಪ್ಪ ತಾಲೂಕು

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಭೈರಾಪುರ | 181D/3a | 1-12 | H 26/2015-16 | 60/2015-16 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಭೈರಾಪುರ ಗ್ರಾಮದ ಸ.ನಂ. 181D/3a** ವಿಸ್ತೀರ್ಣ **1-12** ಎಕರೆ ಜಮೀನಿಗೆ ಸಂಭಂದಿಸಿದಂತೆ ಕ್ರಯ ನೋಂದಣಿ ಪತ್ರಸಂ:**SRG-I 05482/15-16 Dt. 16-11-2015** ರನ್ವಯ ಕ್ರಯದಾರರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಗೋವಿಂದಪ್ಪ ತಂದೆ: ಕೂರಿಗನೂರು ರಾಮನಾಯ್ಕ** ಇವರು ದಿ:30-11-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸು ನೀಡುತ್ತಾ ವಿಚಾರಣೆಯನ್ನು **ದಿ:18-3-2016, 26-3-2016, 11-4-2016** ಮತ್ತು **15-4-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ಬಜ್ಜಣ್ಣ ತಂದೆ: ಗೆಜ್ಜೆಳ್ಳಿ ಹನುಮಂತಪ್ಪ ಸಿದ್ದರಾಂಪುರ ಗ್ರಾಮ ಗಂಗಮ್ಮ ಗಂಡ ರಾಮುಡು ಕಮೇಲಹತ್ತಿರ ಬಳ್ಳಾರಿ ಇವರು ಭೈರಾಪುರ ಗ್ರಾಮದ ಸ.ನಂ. **181D/3a** ವಿಸ್ತೀರ್ಣ 1-12 ಎಕರೆ ಜಮೀನು ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: 5482/15-16 ದಿ: 16-1-2015 ರಲ್ಲಿ ಕ್ರಯ ನೊಂದಣಿಯನ್ನು ಗಂಗಮ್ಮ ಇವರಿಂದ ಬಜ್ಜಣ್ಣ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಶ್ರೀ ಗೋವಿಂದಪ್ಪ ದಿ: 30-11-2015 ರಂದು ತಕರಾರು ಅರ್ಜಿಸಲ್ಲಿಸಿದ್ದು ಶ್ರೀ ಗೋವಿಂದಪ್ಪ ಇವರು ತಕರಾರು ಅರ್ಜಿ ವಾಪಾಸ್ಸು ಪಡೆದ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ತಕರಾರು ಅರ್ಜಿದಾರರಾದ ಗೋವಿಂದಪ್ಪ ತಂದೆ: ಕೂರಿಗನೂರು ರಾಮನಾಯ್ಕ ಭೈರಾಪುರ ಗ್ರಾಮ ಇವರು ಭೈರಾಪುರ ಗ್ರಾಮದ ಸ.ನಂ. **181D/3a** ವಿಸ್ತೀರ್ಣ 1-12 ಎಕರೆ ಜಮೀನು ಸಬ್ ರಿಜಿಸ್ಟರ್ ಕಛೇರಿ ಪತ್ರ ಸಂಖ್ಯೆ: 5482/15-16 ದಿ: 16-1-2015 ರಲ್ಲಿ ಕ್ರಯ ನೊಂದಣಿಯನ್ನು ಗಂಗಮ್ಮ ಇವರಿಂದ ಬಜ್ಜಣ್ಣ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ದಿ: 30-11-2015 ರಂದು ತಕರಾರು ಅರ್ಜಿ ಸಲ್ಲಿಸಲಾಗಿ ಸದ್ರಿ ತಕರಾರು ಅರ್ಜಿಯನ್ನು ವಾಪಾಸ್ಸು ಪಡೆದಿರುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ನೋಂದಣಿ ಕ್ರಯಪತ್ರದ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಭೈರಾಪುರ ಗ್ರಾಮದ ಸ.ನಂ.181**D/3a** ವಿಸ್ತೀರ್ಣ 1-12 ಎಕರೆ ಜಮೀನು ಕ್ರಯನೋಂದಣಿ ಪತ್ರ ಸಂಖ್ಯೆ: **SRG-I 05482/15-16 Dt.16-11-2015** ರನ್ವಯ ಕ್ರಯದಾರರಾದ ಬಜ್ಜಣ್ಣ ತಂದೆ: ಗೆಜ್ಜೆಳ್ಳಿ ಹನುಮಂತಪ್ಪ ಇವರ ಹೆಸರಿಗೆ ಹಕ್ಕುಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 22-04-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ತಹಶೀಲ್ದಾರರು.
ತಹಶೀಲ್ದಾರರು,
ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.